ಅನುವಾದ ಮತ್ತು ಸಂಪಾದನೆ, ಡಾ. ಪ್ರಭುಶಂಕರರು ಕೇಂದ್ರ ಸಾಹಿತ್ಯ ಅಕಾಡೆಮಿಗೆ ಕನ್ನಡದಲ್ಲಿ ಬರೆದುಕೊಟ್ಟಿರುವ 'ಕುವೆಂಪು' ಕೃತಿಯ ಅನುವಾದ, ಇವು ಪ್ರಮುಖವಾದವು. ಇವಲ್ಲದೆ ಕನ್ನಡದ ಹತ್ತು ಪ್ರಾತಿನಿಧಿಕ ಕಥೆಗಳ ಅನುವಾದ (ಭಾರತೀಯ ಶ್ರೇಷ್ಠ ಕಹಾನಿಯಾ), 8 ಪ್ರಾತಿನಿಧಿಕ ಮಕ್ಕಳ ಕಥೆಗಳು(ಶ್ರೇಷ್ಠ ಬಾಲ ಕಹಾನಿಯಾಂ), 'ಮಹಾಭಾರತ ಕೀ ಸೌ ಕಹಾನಿಯಾ'ದಲ್ಲಿನ 50 ಕ್ಕೂ ಹೆಚ್ಚಿನ ಕಥೆಗಳ ಹಿಂದೀ ಅನುವಾದ ಇವು ಪ್ರಮುಖವಾದವು.

ಇದರ ಜೊತೆ ಜೊತೆಗೆ ಹಿಂದಿಯಿಂದಲೂ ಕಥೆ, ಕಾದಂಬರಿ ಮತ್ತು ವೈಚಾರಿಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ದಾಮೋದರ ಖಡಸೆಯವರ 'ಕಥಾಜಗತ್ತು' ಎಂಬ 24 ಕಥೆಗಳ ಸಂಗ್ರಹ, 'ಮೇಘರಾಗ' ಎಂಬ ಅದೇ ದಾಮೋದರ ಖಡಸೆಯವರ ಖ್ಯಾತ ಕಾದಂಬರಿ, ಜೆ.ಪಿ. ಯವರ 'ನವನಿರ್ಮಾಣದೆಡೆಗೆ' ಎಂಬ ಹಿಂದಿ ಲೇಖನಗಳ ಕನ್ನಡ ಅನುವಾದ, 'ಲೋಹಿಯಾ' ಎಂಬ ಶೀರ್ಷಿಕೆಯಲ್ಲಿ ಲೋಹಿಯಾ ಅವರ ಲೇಖನಗಳ ಅನುವಾದ, ಸಾಹಿತ್ಯ ಅಕಾಡೆಮಿ ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಯಲ್ಲಿ ಪ್ರಕಟಿಸಿರುವ 'ಅಜ್ಞೇಯ' ಎಂಬ ಪ್ರಸಿದ್ಧ ಹಿಂದೀ ಕವಿ ಕುರಿತ ಕೃತಿಯ ಅನುವಾದ, ಪ್ರೊ. ಹನುಮಂತ ಅವರೊಂದಿಗೆ ಕೈ ಜೋಡಿಸಿ ಮಾಡಿರುವ, ನರೇಂದ್ರ ದೇವ್ ಅವರ 'ಬೌದ್ಧ ಧರ್ಮ ದರ್ಶನ'ದ ಕನ್ನಡ ಅನುವಾದ ಹೀಗೆ-ಇಂಥವು ಸಾಕಷ್ಟು ಸಂಖ್ಯೆಯಲ್ಲಿವೆ.

ಇಷ್ಟೇ ಮುಖ್ಯವಾದ ಮತ್ತು ವಿಶೇಷ ಉಲ್ಲೇಖಕ್ಕೆ ಅರ್ಹವಾದ ಕೆಲಸವೆಂದರೆ 'ತುಲನಾತ್ಮಕ ಸಾಹಿತ್ಯ ಔರ್ ಅನುವಾದ' ಎಂಬ ಹಿಂದಿಯಲ್ಲಿ ಬರೆದ ಲೇಖನಗಳ ಮಹತ್ವದ ಸಂಪುಟದಲ್ಲಿ ಸಾಹಿತ್ಯ ಮತ್ತು ಅನುವಾದ ಕುರಿತ ಲೇಖನಗಳ ಜೊತೆಗೆ 'ಕನ್ನಡದ ಕಥಾ ಸಾಹಿತ್ಯ', 'ಕನ್ನಡದಲ್ಲಿ ರಾಮಾಯಣ-ರಾಮ ಮತ್ತು ಕೃಷ್ಣ', 'ಕನ್ನಡ ಸಾಹಿತ್ಯದಲ್ಲಿ ಅನುವಾದದ ಪರಂಪರೆ ಮತ್ತು ವಿಕಾಸ', 'ಆಧುನಿಕ ಹಿಂದೀ ಸಾಹಿತ್ಯ ಕ್ಷೇತ್ರಕ್ಕೆ ಕನ್ನಡ ಲೇಖಕರ ಕೊಡುಗೆ', 'ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ದಲಿತ ಚೇತನ' ಎಂಬ ಲೇಖನಗಳಲ್ಲದೆ 'ಸಾಹಿತ್ಯದ ಸಾಮಾಜಿಕ ಅನಿವಾರ್ಯತೆ', ಸಾಮಾಜಿಕ ಪರಿವರ್ತನೆ ಮತ್ತು ಇತಿಹಾಸ ನಿರ್ಮಾಣದಲ್ಲಿ ಭಾಷೆಗಳ ಪಾತ್ರ ಮೂಲಕ ಹಿಂದೀ ಜನರಿಗೆ ಕನ್ನಡ ಸಾಹಿತ್ಯ ಕುರಿತ ತಿಳಿವಳಿಕೆಯನ್ನು ವಿಶದವಾಗಿ ಮಾಡಿಕೊಟ್ಟಿರುವುದು. ಇದನ್ನು ಸ್ವಲ್ಪ ವಿವರವಾಗಿ ನೋಡಬಹುದು.

'ಅನುವಾದದಲ್ಲಿ ಪ್ರತಿಯೊಂದು ಭಾಷೆಗೂ ತನ್ನ ಸಂಸ್ಕೃತಿಯೊಂದಿಗೆ ಗಾಢ ನಂಟು ಇರುತ್ತದೆ. ಭಾಷೆಯಲ್ಲಿ ಸಂಸ್ಕೃತಿಯ ಪಳೆಯುಳಿಕೆಗಳು ಇರುತ್ತವೆ' ಎಂಬ ಶಂಬಾ ಅವರ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಅನುವಾದ ಮಾಡುವಾಗ ಸಾಂಸ್ಕೃತಿಕ ವಿಭಿನ್ನತೆ ಮತ್ತು ದೇಶೀ ಧ್ವನಿಗಳನ್ನು ಸಂವಹನ ಮಾಡುವುದು ಬಹಳ ಮುಖ್ಯ ಎನ್ನುವುದು ಲಲಿತಾಂಬಾ ಅವರ ಖಚಿತ ಅಭಿಪ್ರಾಯ.



ಮೇಲೆ ಹೇಳಿದ ತೌಲನಿಕ ಅಧ್ಯಯನ ಕುರಿತ ಅವರ ಪುಸ್ತಕದ ಲೇಖನಗಳಲ್ಲಿ ಕನ್ನಡದ ದೇವನೂರರ 'ಒಡಲಾಳ', 'ಕುಸುಮಬಾಲೆ', ಶಿವತೀರ್ಥನ್ ಅವರ 'ಗೆಂಡಗೈಯ್ಯ', ತೇಜಸ್ವಿ ಅವರ 'ಕರ್ವಾಲೋ', 'ಅಬಚೂರಿನ ಪೋಸ್ಟ್ ಆಫೀಸು', ರಾವ್ ಬಹದ್ದೂರರ 'ಗ್ರಾಮಾಯಣ' ಕಾದಂಬರಿ, ದಲಿತ ಬಂಡಾಯ ಸಾಹಿತ್ಯದ ಪ್ರಮುಖ ಕೃತಿಗಳು ಅವುಗಳ ವಿಶೇಷತೆಗಳು, ಭೈರಪ್ಪನವರ ಕಾದಂಬರಿಗಳು, ಎಲ್ಲವೂ ಹಿಂದೀ ಜಗತ್ತಿಗೆ ತೆರೆದುಕೊಳ್ಳುತ್ತವೆ ಮತ್ತು ಅವುಗಳ ಬಗೆಗಿನ ವಿಮರ್ಶಾ ಬರಹಗಳಲ್ಲಿ ಉಲ್ಲೇಖಿತವಾಗುವುದಷ್ಟೇ